# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

## ವಿಶೇಷ ರಾಜ್ಯ ಪತ್ರಿಕೆ

| ಭಾಗ – ೬–ಬಿ<br>Part – VI-B | ಬೆಳಗಾವಿ, ಮಂಗಳವಾರ, ೦೨ ಜೂನ್, ೨೦೨೬ (ಜ್ಯೇಷ್ಠ ೧೨, ಶಕ ವರ್ಷ ೧೯೪೮)<br>BELAGAVI, TUESDAY, 02 JUNE, 2026 (JYESTHA 12, SHAKA VARSHA 1948) | ನಂ. ೧೨<br>No. 12 |
|---|---|---|

ಕರ್ನಾಟಕ ಸರ್ಕಾರ

ಕಂದಾಯ ಇಲಾಖೆ

ಕ್ರ.ಚುಶಾ/ಗ್ರಾಪಂ:ವಿವ:01/2026-27

ಜಿಲ್ಲಾಧಿಕಾರಿಗಳ ಕಾರ್ಯಾಲಯ

ಬೆಳಗಾವಿ ದಿನಾಂಕ: 02-06-2026

## ಅಂತಿಮ ಅಧಿಸೂಚನೆ

ಸರಕಾರದ ಅಧಿಸೂಚನೆ ನಂ. ಆರ್.ಡಿ. 106. ಎಸ್.ಎಸ್.ಸಿ:2021, ದಿನಾಂಕ: 23.12.2021 ರನ್ವಯ ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕಿನ ಯರಗಟ್ಟಿ ಹೋಬಳಿಯನ್ನು ನೂತನ ಯರಗಟ್ಟಿ ತಾಲೂಕನ್ನಾಗಿ ಘೋಷಿಸಿದ್ದರ ಪ್ರಯುಕ್ತ, ಮಬನೂರ ಗ್ರಾಮ ಪಂಚಾಯತಿಯು ಯರಗಟ್ಟಿ ತಾಲೂಕಿನಲ್ಲಿರುತ್ತದೆ. ಮಬನೂರ ಗ್ರಾಮ ಪಂಚಾಯತಿಯಲ್ಲಿ ಬರುವ ಗೊಂದಿ ಹಾಗೂ ಕಲ್ಲೊಳ್ಳಿ ಗ್ರಾಮಗಳು ಮಾತ್ರ ಸವದತ್ತಿ ತಾಲೂಕಿಗೆ ಒಳಪಡುವದರಿಂದ ಯರಗಟ್ಟಿ ತಾಲೂಕಿನ ಮಬನೂರ ಗ್ರಾಮ ಪಂಚಾಯಿತಿಯಿಂದ ಗೊಂದಿ ಹಾಗೂ ಕಲ್ಲೊಳ್ಳಿ ಗ್ರಾಮಗಳನ್ನು ಸವದತ್ತಿ ತಾಲೂಕಿನ ಸಮೀಪದ ತೆಗ್ಗಿಹಾಳ ಗ್ರಾಮ ಪಂಚಾಯತಿಗೆ ಸೇರ್ಪಡೆ ಮಾಡಲು ಹಾಗೂ ಮಬನೂರ ಗ್ರಾಮ ಪಂಚಾಯತಿಯಲ್ಲಿ ಮಬನೂರ ಗ್ರಾಮವನ್ನು ಮಾತ್ರ ಇರಿಸಿ ಗ್ರಾಮ ಪಂಚಾಯತಿಯನ್ನಾಗಿ ಮುಂದುವರೆಸಲು ಈ ಕಾರ್ಯಾಲಯದಿಂದ ದಿನಾಂಕ: 06.05.2026 ರಡಿ ಕರಡು ಕರಡು ಅಧಿಸೂಚನೆಯನ್ನು ಹೊರಡಿಲಾಗಿತ್ತು ಸದರಿ ಕರಡು ಅಧಿಸೂಚನೆಯಿಂದ ಭಾದಿತರಾಗಬಹುದಾದ ಯಾವದೇ ವ್ಯಕ್ತಿಗಳು ಜಿಲ್ಲಾಧಿಕಾರಿಗಳು, ಬೆಳಗಾವಿ ಅವರಿಗೆ ತಮ್ಮ ಆಕ್ಷೇಪಣೆ ಮತ್ತು ಸಲಹೆಗಳನ್ನು ಈ ಕರಡು ಅಧಿಸೂಚನೆ ಪ್ರಕಟಗೊಂಡ ದಿನಾಂಕದಿಂದ 7 (ಎಳು) ದಿನಗಳ ಒಳಗಾಗಿ (ಅಂದರೆ ದಿನಾಂಕ: 13.05.2026 ರಂದು ಅಥವಾ ಒಳಗಾಗಿ) ಜಿಲ್ಲಾಧಿಕಾರಿಗಳು, ಬೆಳಗಾವಿ ಅವರಿಗೆ ಸಲ್ಲಿಸಲು ಕಾಲಾವಕಾಶ ನೀಡಲಾಗಿತ್ತು. ಸದರಿ ಅವಧಿಯಲ್ಲಿ ಈ ಕುರಿತು ಯಾವುದೇ ಆಕ್ಷೇಪಣೆ ಮತು ಸಲಹೆಗಳು ಸ್ವೀಕೃತಗೊಂಡಿರುವುದಿಲ್ಲಾ. ಸಾರ್ವಜನಿಕರ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು.

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 4(1) ಮತ್ತು 4(2) ರಲ್ಲಿ ಪ್ರದತ್ತವಾದ ಅಧಿಕಾರದ ಮೇರೆಗೆ ಬೆಳಗಾವಿ ಜಿಲ್ಲಾಧಿಕಾರಿಯಾದ ಮೊಹಮ್ಮದ ರೋಷನ್, ಭಾ.ಆ.ಸೇ, ಎಂಬ ಹೆಸರಿನ ನಾನು ಬೆಳಗಾವಿ ಜಿಲ್ಲೆಯ ಸವದತ್ತಿ ಹಾಗೂ ಯರಗಟ್ಟಿ ತಾಲೂಕಿನ ಕೆಳಕಾಣಿಸಿದ ಗ್ರಾಮ ಪಂಚಾಯತಿಗಳಿಗೆ ಸಂಬಂಧಿಸಿದಂತೆ ಕೋಷ್ಟಕ ರಲ್ಲಿ ನಮೂದಿಸಿದಂತೆ ಅನುಕ್ರಮವಾಗಿ ಕಾಲಂ (3) ರಲ್ಲಿ ನಮೂದಿಸಿದ ಗ್ರಾಮವನ್ನು ಸಂಬಂಧಿಸಿದ ಗ್ರಾಮ ಪಂಚಾಯತಿಯ

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**



ಕೇಂದ್ರ ಸ್ಥಾನವೆಂದು ಮತ್ತು ಕೋಷ್ಟಕದ ಕಾಲಂ (4) ರಲ್ಲಿ ನಮೂದಿಸಿದ ಗ್ರಾಮ ಅಥವಾ ಗ್ರಾಮಗಳ ಸಮೂಹಗಳನ್ನು ಗ್ರಾಮ ಪಂಚಾಯತಿಯ ಪ್ರದೇಶವೆಂದು ಘೋಷಿಸಿ ಅಂತಿಮ ಅಧಿಸೂಚನೆ ಹೊರಡಿಸಿದ್ದೇನೆ.

**ಕೋಷ್ಟಕ**

| ಅ ನಂ | ತಾಲೂಕಿನ ಹೆಸರು | ಗ್ರಾಮ ಪಂಚಾಯತಿಯ ಕೇಂದ್ರ ಸ್ಥಾನ | ಗ್ರಾಮ ಪಂಚಾಯತಿಯೆಂದು ಘೋಷಿಸಿರುವ ಗ್ರಾಮ ಅಥವಾ ಗ್ರಾಮಗಳ ಸಮೂಹ |
|---|---|---|---|
| **1** | **2** | **3** | **4** |
| 1 | ಯರಗಟ್ಟಿ | ಮಬನೂರ | ಮಬನೂರ |
| 2 | ಸವದತ್ತಿ | ತೆಗ್ಗಿಹಾಳ | 1.ತೆಗ್ಗಿಹಾಳ |
| | | | 2.ಜಕಬಾಳ |
| | | | 3.ಗೋಂದಿ-ಕಲ್ಲೊಳ್ಳಿ |

(ಮೊಹಮ್ಮದ ರೋಷನ್)
ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ.

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಸರ್ಕಾರಿ ವಿಭಾಗೀಯ ಮುದ್ರಣಾಲಯ, ಧಾರವಾಡ.